doc-123
T-P-2

SATYAVADI Founded 1917 Regd. No. M 1299

# ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 172 | ಶುಕ್ರವಾರ 22—3—46 | ಬಿಡಿ ಪ್ರತಿ 3 ಪೈ

## ಹಬ್ಬದ ದಿನವೂ ಹಳೆಯ ಗಂಡನೇ !

ಛಾ || ಕೇಂದ್ರ ಶಾಸನ ಸಭೆಯಲ್ಲಿ ಡಾ || ಜಿ. ವಿ. ದೇಶಮುಖರವರು ಕಾಂಗ್ರೆಸ್ಸಿನ ಮುಖಂಡರಲ್ಲೊಬ್ಬರು. ಹಿಂದೂಗಳನ್ನುದ್ದಾರ ಮಾಡಲು ಅವರು ಕಂಕಣವನ್ನು ಕಟ್ಟಿಕೊಂಡಿರುವರು. ಇದಕ್ಕಾಗಿಯೇ ಇವರು ಶಾಸನಸಭೆಯಲ್ಲಿ ಸಂಘಟ ಸಂಸ್ಕಾರ - ಸಂಬಂಧವಾದ ಶಾಸನಗಳನ್ನು ಪ್ರತಿಪಾದಿಸುತ್ತಾ ಇದ್ದಾರೆ. ಹಿಂದೂ ವಿವಾಹ ಸಂಸ್ಕರಣ ಕಾನೂನು ಇವುಗಳಲ್ಲಿ ಒಂದು. ಕಳೆದ ಶಾಸನ ಸಭೆಯಲ್ಲಿ ಇದು ಚರ್ಚೆಗೆ ಬಂತು. ಈ ಕಾನೂನಿನ ಪ್ರಕಾರ ಸಶಾಸ್ತ್ರೀಯವಾಗಿ ಮಾಡಿಕೊಂಡ ಮದುವೆಗಳೂ ಕೂಡ ಸ್ಪೆಷಲ್ ಮ್ಯಾರೇಜ್ ನಕ್ಷತ್ರನು ಸರಿಸಿ ರಿಜಿಸ್ತರು ಮಾಡಲ್ಪಡಲು ಅವಕಾಶವು ಕಲ್ಪಿಸಲ್ಪಡುತ್ತದೆ ಪ್ರಜಾಭಿಪ್ರಾಯವನ್ನು ತಿಳಿದುಕೊಳ್ಳಲು ಇನ್ನೂ ಕಾನೂನನ್ನು ಜಾರಿಗೆ ಶಂ ದಿಲ್ಲಿ. ಆಗಸ್ಟ್ 31 ರವರೆಗೂ ವಾಯಿದೆ ಕೊಡಲ್ಪಟ್ಟಿದೆ.

ಆಧ್ಯಾತ್ಮಿಕ ಸಂಬಂಧವೇನೂ 'ರಿಜಿಸ್ತರು ವಿವಾಹ,' ಗಳಲ್ಲಿರುವುದಿಲ್ಲ. ಇದರಲ್ಲಿ ಕೇವಲ ಐಹಿಕಾ ವ್ಯವಹಾರವೇ ಪ್ರಧಾನವಾದದ್ದು. ಅದುದಂದದ ಕ್ಷಮಾ ಗುಣಕ್ಕೂ ಸರಕಾರ ಸಾಮರಸ್ಯಗಳಿಗೂ ಅದರಲ್ಲಿ ಸ್ಥಾನವೇ ಇರುವುದಿಲ್ಲ. ಇದರ ಫಲವೇನಾಗುವುದು— (1) ಗೃಹಕಲ್ಲೋಲ (2) ಸಾಂಘಿಕ ವಿಪ್ಲವ. ಇದು ಊಹೆಯಲ್ಲ. ಪಾಶ್ಚಾತ್ಯ ಸಾಂಘಿಕ ನಾಗರೀಕ ವಿಕಾಸವು ಇದನ್ನು ವ್ಯಕ್ತಪಡಿಸುತ್ತಿದೆ. ಅಲ್ಲಿ ಒಬ್ಬಾಕೆ ಮಮತೆಯ ದಿನ ತನ್ನ ಛಾಯಾ ಚಿತ್ರದಲ್ಲಿ ಮಿಶಿಗಳನ್ನೂ ಕನ್ನಡಕಗಳನ್ನೂ ತೆಗೆದುಹಾಕಿ ತನ್ನನ್ನು ಅಪಮಾನ ಪಡಿಸಿದನೆಂದು ಗಂಡನನ್ನು ವಿಡಲು ಕೋರ್ಟಿಗೆ ಹತ್ತಿದಳು. ಕಾಫಿಗೆ ಸ್ವಲ್ಪ ಸಕ್ಕರೆ ಹೆಚ್ಚಾಗಿ ಹಾಕಿದಳೆಂದೂ ಆ ಕಾರಣದಿಂದ ವಿವಾಹ ವಿಚ್ಛೇದನ ವಾಗಬೇಕೆಂದೂ ಒಬ್ಬ ಪಾಶ್ಚಾತ್ಯನು ಕೋರ್ಟಿಗೆ ಅರ್ಜಿ ಹಾಕಿದಂತೆ. ಪ್ರೇಮವೇ ಮೂಲವೆಂದು ನಡೆಯುತ್ತಿರುವ ಪಾಶ್ಚಾತ್ಯ ವಿವಾಹಗಳಿಗೆ ವಿವಾಹ ವಿಚ್ಛೇದನವು ಹೇಗೆ ಅಗಾಧವಿಕಗೆ ಅನುಕೂಲ ಪಡಿಸುತ್ತದೋ ಅರಿಯದೆ. ಕಣ್ಣುಗಳನ್ನು ಮುಚ್ಚಿಕೊಂಡು ಅವರ ಪದ್ಧತಿಗಳನ್ನು ಅನುಸರಿಸಿ ಮುಂದು ಕೆತ್ತು ಚಪ್ಪರವನ್ನು ಹಾಕುವಂತೆ, ಹಣ್ಣಿನಂಥಾ ನಮ್ಮ ಪ್ರಾಚೀನ ಭಾರತೀಯ ನಾಗರೀಕತೆಯು ಸ್ಥಾನದಲ್ಲಿ ಹಬ್ಬದ ದಿನವೂ ಹಳೆಯ ಗಂಡನೇ ?

## ಪರ್ಷಿಯಾ – ರಷ್ಯಾ – ಅಮೇರಿಕಾ

### ಪರ್ಷಿಯಾ ರಷ್ಯಾ ಸಮಸ್ಯೆ

ವಾಷಿಂಗ್ಟನ್ ಮಾ 21— ರಷ್ಯಾದ ಮೇಲೆ ಪರ್ಷಿಯಾ ಮಾಡಿರುವ ಆಕ್ಷೇಪಣೆಯು ಅಸಿರೀಕ್ಷಿತವೆಂದೂ ತಾನು ಈ ಬಗ್ಗೆ ವಾದಕ್ಕೆ ಸಿದ್ಧಪಡಿಸಿಕೊಳ್ಳಬೇಕಾಗಿರುವುದೆಂದೂ, ಅದಕ್ಕಾಗಿ ಕೌನ್ಸಿಲ್ 16 ದಿನಗಳು ಮುಂದುವರಿಸಬೇಕೆಂದೂ ರಷ್ಯಾಜೇಳಿಕೆಯಾಗಿದೆ. ಈ ವಿಚಾರವು ಕೂಡಲೇ ಚರ್ಚಿಸಲ್ಪಡಬೇಕೆಂದು ಅಮೇರಿಕಾದ ಕೇಳಿಕೆಯಾಗಿದೆ.

### ಕೊರ್ಚ್ಚೆ ರಾಜರು

ಎರ್ನಾಕುಲಂ ಮಾ 21 — ಶ್ರೀ ಕೇರಳವರ್ಮರವರು ಕೊರ್ಚ್ಚೆ ಮಹಾರಾಜರಾಗಿ ನಿಯುಮಿಸಲ್ಪಟ್ಟರು. ದರ್ಬಾರು ಮುಂತಾದ ಎಲ್ಲಾ ಸಮಾರಂಭಗಳೂ ನಡೆದವು.

### ಟೋಜೋ ವಿಚಾರಣೆ

ಟೋಕಿಯೋ ಮಾ 20 — ಜ || ಟೋಜೋವಿನ ವಿಚಾರಣೆಯು ಮೇ 1 ಕ್ಕೆ ಪ್ರಾರಂಭವಾಗುವುದೆಂದು ತಿಳಿಯಬಂದಿದೆ.

### ಹೊಟ್ಟೇ ಲೂಟಿ

ದಾಂಬರ್ಗ್ ಮಾ 20— ಇಲ್ಲಿಯ ಅನೇಕ ರೊಟ್ಟಿ ಅಂಗಡಿಗಳಿಗೆ ಒನ್ನು ಸುಗ್ಗಿ ರೊಟ್ಟಿಗಳನ್ನು ಲೂಟಿ ಮಾಡಿದರೆಂದು ಪ್ರಕಟವಾಗಿದೆ.

---

ಎಸ್ತುವ ಪಾಶ್ಚಾತ್ಯ ನಾಗರೀಕತಾ ಭಾವನೆಯನ್ನು ಪ್ರವೇಶಗೊಳಿಸಲು ಪ್ರಯತ್ನಿಸುವುದು ದೇಶಹಿತಚಿಂತಕ ಕಾರ್ಯವೆಂದು ಹೇಳಲಾಗುವುದಿಲ್ಲ. (ಓಂ)

### ಭಾರತಕ್ಕೆ ಸಹಾಯದ ಬಗ್ಗೆ ಪ್ರೆ || ಟ್ರೂಮನ್ನರ ಪ್ರಾಗ್ವಾನ

ವಾಷಿಂಗ್ಟನ್ ಮಾ 20— ಸರ್ ರಾಮಸ್ವಾಮಿ ಮೊದಲಿಯಾರಿಗೆ ಸಂದರ್ಭದಲ್ಲಿ ಪ್ರೆ || ಟ್ರೂಮನ್ನರು ಭಾರತದಲ್ಲಿ ಕೈಗಾರಿಕಾ ಶಿಲ್ಪಿಗಳನ್ನು ಮಾಡುವುದಾಗಿ ವಾಗ್ದಾನ ಮಾಡಿರುವರೆಂದೂ ಇಂದೂ ಕಾಲು ಮಿಲಿಯ ಟನ್ ಗೋಧಿಯು ಭಾರತಕ್ಕೆ ದೊರೆಯುವುದೆಂದೂ ಹೇಳಲಾಗಿದೆ.

### ಗಾಂಧಿಜೀ ಭೇಟಿ

ಪೂನಾ ಮಾ 20— ಆಜಾದ್ ಹಿಂದ್ ಸರಕಾರದ ಮಾಜಿ ಪ್ರಚಾರ ಮಂತ್ರಿ ಶ್ರೀ ಐಯರ್‌ರವರು ಗಾಂಧೀಜಿಯವರನ್ನು ಭೇಟಿ ಮಾಡಿ 75 ನಿಮಿಷ ಮಾತುಕತೆ ನಡೆಸಿದರು.

### ಕಾಂಗ್ರೆಸ್ಸಿನ ವಿಜಯ

ಬೊಂಬಾಯಿ ಮಾ 21 — ಬೊಂಬಾಯಿ ಶಾಸನ ಸಭೆಯಲ್ಲಿ ಹೆಚ್ಚಿಗೆ ಮಂದಿ ಕಾಂಗ್ರೆಸ್ ಸದಸ್ಯರೇ ಬಂದಿದ್ದಾರೆ.

### ತಲೆಯಿಲ್ಲದ ಶವ

ಮದರಾಸಿನ ಸಾಂಘೋನಾದ ಸಮಾಪದಲ್ಲಿ ಅಡಿಯಾರು ಕಾಲುವೆಯಲ್ಲಿ ತಲೆಯಿಲ್ಲದ ಒಂದು ಶವವು ಚೀಲದಲ್ಲಿಡಲ್ಪಟ್ಟಿದ್ದು ತೇಲುತ್ತಿರಲು ಪೋಲೀಸರು ತೆಗೆಸಿದರು.

### ಲಂಚನಿರೋಧ

ಮೈಸೂರು ಸಂಸ್ಥಾನದಲ್ಲಿ ಲಂಚ ನಿರೋಧ ಕಾರ್ಯಕ್ಕೆ ರೂ. 1500—1800 ಸಂಬಳದ ಉನ್ನತಾಧಿಕಾರಿಯನ್ನು ನೇಮಿಸಬೇಕೆಂದು ಸನ್ನಿತಿಯವರು ಸಲಹೆ ಮಾಡಿರುವುದಾಗಿ ತಿಳಿಯಬಂದಿದೆ.

## ಮುಷ್ಕರಗಳಿಗೆ ಕೊನೆಮೊದಲಿಲ್ಲ !

ಪರೀಕ್ಷೆಗಳಿಗೆ ಕಳಿಹಿಸದಿದ್ದಲ್ಲಿ ವಿದ್ಯಾರ್ಥಿಗಳ ಮುಷ್ಕರ.

ಕೂಲಿ ಸಾಲದೆಂದು ಕೂಲಿಗಾರರ ಮುಷ್ಕರ.

ಸಂಬಳ ಸಾಲದೆಂದು ಪೋಸ್ಟು ನೌಕರರ ಮುಷ್ಕರ.

ರಜಾ ಇಲ್ಲವೆಂದು ಹೋಟಲುಕೆಲಸಗಾರರ ಮುಷ್ಕರ.

ಸಕ್ಕರೆ ಗೋಧಿಹಿಟ್ಟುಗಳನ್ನು ಸಾಕಾಗುವಷ್ಟು ಕೊಡಲಿಲ್ಲವೆಂದು ಹೋಟಲು ನೌಲೀಕರ ಮುಷ್ಕರ.

ಹೀಗೆಯೇ ಬಸ್ಸುಗಳವರ ಮುಷ್ಕರ, ನಾವಿಕರ ಮುಷ್ಕರ, ವೈಮಾನಿಕರ ಮುಷ್ಕರ, ಇತ್ಯಾದಿ. ಈ ಮುಷ್ಕರಗಳಿಗೆ ಕೊನೆಮೊದಲೇ ಇಲ್ಲ. ಹಿಂದಿನ ಕಾಲದಲ್ಲಿ ಎಂದೂ ಕೇಳಿಬಾರದಿದ್ದ ಮುಷ್ಕರಗಳು ಈಚೆಗೆ ಪ್ರಬಲಿಸಿವೆ. ಸರ್ಕಾರಗಳವರೂ, ಜನಪ್ರಮುಖರೂ ಈ ವಿಷಯವನ್ನು ಜೆನ್ನಾಗಿ ಪರಿತೀಲಿಸಿ, ಇನ್ನು ಮುಂದೆ ಎಲ್ಲಿಯೂ, ಯಾವ ಬಗೆಯ ಮುಷ್ಕರವೂ ಇಗೆದ ರೀತಿಯಲ್ಲಿ ನಿರ್ವಾಹ ಮಾಡದಂತೆ ಜನಹಿತ ದೃಷ್ಟಿಯಿಂದ ಅತ್ಯವಶ್ಯಕವಾಗಿರುತ್ತದೆ.

## ಮಂಗಳೂರಿನಲ್ಲಿ ಸಂಬಳವೇರಿದ ತುಲನಾತ್ಮಕ ಪಟ್ಟಿ

| | | |
|---|---|---|
| ಸರಕಾರ ನೌಕರರಿಗೆ | ಶೇಕಡಾ | 40 |
| ಹಂಚಿನ ಕಾರ್ಖಾನೆ | ,, | 110 |
| ಬೀಡಿ | ,, | 140 |
| ಕೈಮಗ್ಗ | ,, | 200 |

## ಮುಂಚೂರಿಯಾ

ರಷ್ಯಾ ಸೇನೆಯು ಮುಂಚೂರಿಯಾದಿಂದ ಹೊಂಟುಹೋಗುತ್ತಿರುವುದು ಅಮೇರಿಕಾ ಖಂಡಿತವಾಗಿ ಒಡೆದ ಗೂಢಾಸ್ತ್ರನ ಫಲವೆಂದು ಹೇಳಲಾಗಿದೆ. ಮುಂಚೂರಿಯಾವು ಹಿಂದಿನ ಸ್ಥಿತಿಗೆ ಬರಲು ಇನ್ನೂ ಮೂರು ವರ್ಷಗಳ ಕಾಲ ಅವಶ್ಯಕವೆಂದು ಅಭಿಪ್ರಾಯಪಟ್ಟಿರುವರು.

## ಚೆನ್ನಾ ಬೆಳ್ಳಿ ಧಾರಣೆ

| | |
|---|---|
| ಸವರನ್ 1 ಕ್ಕೆ | ರೂ. ~~64-0-0~~ |
| ಚಿನ್ನ ತೊಲ 1 ಕ್ಕೆ | ~~34-12-0~~ |
| ಬೆಳ್ಳಿ | ~~1-3-0~~ |

# ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸಿಯಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜೆ. ಟಿ. ಮೆಡೆರಾಸು.



ಉಡುಪುಗಳನ್ನು ಅತಿ ಬೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು
ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.



ಹಸಿ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ತಿನರಾಂಪೇಟೆ ಮೈಸೂರು.

At Ranjit
2 nd Week
Shirin Farad
— with —
RAGINI & JAYANT

At Opera —
Morning Shows
From 22–3–46
LADY OF BURLSQUE
3 ನೇ ವಾರ
ಮೆಹತಾಬ್ — ಸುರೇಂದ್ರ
ಪಾತ್ರವಹಿಸಿರುವ
.... ವಿಶ್ವಾಸ್....

ಸುಭಾಷ್
ರವರ ಜೀವನ ಚರಿತ್ರೆ
— ಆಂದು—ಬಾಬು —
— ಇಂದು ನೇತಾಜಿ
ಬರೆದವರು "ಕಾಂತ್"
ಸಾಹಿತ್ಯ ಮಂದಿರ
ಜಗನ್ಮೋಹನ ಬಂಗ್ಲೆ ರಸ್ತೆ
ಮೈಸೂರು



Edited, Printed and published by M. S. Krishna Rao, at the Satvavadi Press, Chamareja Agrahar, Mysore